## ಶ್ಯಾಮ್ ಸಿಂಗನ ಮೊಬೈಲ್!

ಡಿಂಗಣ್ಣ ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿರುವ ಮೊಬೈಲ್ ಅಂಗಡಿಗೆ ಹೋಗಿ, 'ಶ್ಯಾಮ್ ಸಿಂಗ್‌ನ ಮೊಬೈಲ್ ತೋರ್ಸಣ್ಣ' ಎಂದ. ಅಂಗಡಿಯಾತ ಆಶ್ಚರ್ಯಚಕಿತನಾಗಿ, 'ಈ ಶ್ಯಾಮ್ ಸಿಂಗ್ ಯಾರು?' ಎಂದು ಗದರಿದ. ಆಗ ನೇಪಾಳಿ ವಿನೀತನಾಗಿ, 'ಟೀವಿಯಲ್ಲಿ ಜಾಹಿರಾತು ಬರುತ್ತಲ್ವಾ? ಶ್ಯಾಮ್ ಸಿಂಗ್ ಗೊತ್ತಿಲ್ವಾ?' ಕೇಳಿದ. ಅಂಗಡಿಯಾತ, 'ಓಹೋ, ಅದು ಶ್ಯಾಮ್ ಸಿಂಗ್ ಅಲ್ಲ, ಸ್ಯಾಮ್ ಸಂಗ್ ಕಣೋ' ಎಂದು ವಿವರಣೆ ಕೊಟ್ಟು, ಮೊಬೈಲ್ ತೋರಿಸಲಾರಂಭಿಸಿದ!

**ರಮಣ್ ಶೆಟ್ಟಿ ರೆಂಜಾಳ್**



## ಕಾರಣ

ಗುಂಡಣ್ಣ ಅಂದು ಕಚೇರಿಗೆ ಎಂದಿಗಿಂತ ಎರಡು ತಾಸು ಲೇಟ್ ಆಗಿ ಬಂದ. ಬಾಸ್, 'ಯಾಕ್ರೀ ಗುಂಡಣ್ಣ ಇವತ್ತು ಇಷ್ಟು ಲೇಟ್ ಮಾಡಿದ್ರೀ?' ಎಂದು ಪ್ರಶ್ನಿಸಿದಾಗ, ಆತ 'ಸಾರ್ ನಾನು ಬರಬೇಕಿದ್ದರೆ ಬಸ್ ಸ್ಟಾಪಿನಲ್ಲಿ ಓರ್ವ ವಯಸ್ಸಾದ ಅಜ್ಜಿ ಐನೂರು ರೂಪಾಯಿ ನೋಟು ಕಳಕೊಂಡಿದ್ರು... ಅದಕ್ಕೆ...' ಎಂದು ಹೇಳುತ್ತಿದ್ದವನನ್ನು ಅರ್ಧಕ್ಕೆ ತಡೆದ ಬಾಸ್, 'ವೆರಿ ಗುಡ್ ಗುಂಡಣ್ಣಾ, ಅಂದ್ರೆ ನೀವು ಆ ಅಜ್ಜಿಗೆ ದುಡ್ಡು ಹುಡುಕಿ ಕೊಡಲು ಸಹಾಯ ಮಾಡ್ತಾ ಇದ್ರಿ ಅಂದಂಗಾಯ್ತು' ಎಂದ ಸಂತಸದಿಂದ. ಗುಂಡಣ್ಣ, 'ಸಾರ್ ಅದು ಹಾಗಲ್ಲ... ನಾನು ಆ ನೋಟಿನ ಮೇಲೆ ನಿಂತಿದ್ದೆ, ಆ ಮುದುಕಿ ಅಲ್ಲಿಂದ ಹೋಗೋವರೆಗೂ ಕಾಯ್ತಾ ಇದ್ದೆ... ಹೀಗಾಗಿ ಲೇಟ್ ಆಯ್ತು' ಎಂದ.

**ಅರವಿಂದ ಜಿ. ಜೋಷಿ**



ಕಲೆ: ಗಣೇಶ ಆಚಾರ್ಯ